PRATIBIMBA –Multidisciplinary Kannada Research Journal of IIMRD
ISSN: 2582-2284
Vol-2 Issue 4, JAN-FEB 2021, 85-89
©*IIMRD*, Mysuru
www.iimrd.com

# ಜನಸಾಮಾನ್ಯರ ನೆಲೆಗಟ್ಟಿನಲ್ಲಿ ಭ್ರಷ್ಟಾಚಾರ: ಸಮಾಜಶಾಸ್ತ್ರಿಯ ಅಧ್ಯಯನ

ವಿಕ್ರಮ್ ಜಿ. ಬಿ [1] ಮತ್ತು ಡಾ. ಪೂರ್ವಾಚಾರ್ ಎಂ.[2]

**ಪೀಠಿಕೆ**

ಇತ್ತೀಚಿನ ದಿನಗಳಲ್ಲಿ ಭ್ರಷ್ಟಾಚಾರ ಹಾಗೂ ದುರಾಡಳಿತ ತನ್ನದೇ ಅದ ಪ್ರಭಾವವನ್ನು ಬೀರಿರುವ ವಿಷಯವಾಗಿದೆ. ಭ್ರಷ್ಟಾಚಾರವು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಸಾಂಕ್ರಾಮಿಕ ರೋಗದಂತೆ ಹರಡುತ್ತಿದೆ. ಭ್ರಷ್ಟಾಚಾರವು ಸರ್ವವ್ಯಾಪ್ತಿಯು, ಸರ್ವಸ್ಪರ್ಶಿಯು ಆಗಿದೆ. ಇತ್ತೀಚಿನ ದಿನಗಳಲ್ಲಿ ಇದು ವಿಶ್ವದ ಎಲ್ಲಾ ರಾಷ್ಟ್ರಗಳಲ್ಲಿಯೂ ತನ್ನ ಅಸ್ತಿತ್ವವನ್ನು ಬಹಿರಂಗವಾಗಿ ಪ್ರದರ್ಶಿಸುತ್ತ '*ಸರ್ವಂತರ್ಯಾಮಿ*' ಎನಿಸಿಕೊಂಡಿದೆ. ದೇಶದ ಅಡಳಿತ ವ್ಯವಸ್ಥೆಯಲ್ಲಿ ಆಳವಾಗಿ ಬೇರುಬಿಟ್ಟಿರುವ ಬಹುದೊಡ್ಡ ಸಾಮಾಜಿಕ ಪಿಡುಗಾಗಿ ಭ್ರಷ್ಟಾಚಾರ ಪರಿಣಮಿಸಿದೆ. ಮಾನವ ತನ್ನ ನಾಗರಿಕ ಜೀವನವನ್ನು ಆರಂಭಿಸಿದ ಕಾಲದಿಂದ ಇಂದಿನವರೆಗೂ ಕೂಡ ಭ್ರಷ್ಟಾಚಾರವು ವಿವಿಧ ಸ್ವರೂಪಗಳಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಹೀಗಾಗಿ ಉತ್ತಮ ಸೇವೆ ಮತ್ತು ಆಡಳಿತವನ್ನು ಸಕಾಲದಲ್ಲಿ ಪಡೆಯಲು ಕಷ್ಟಕರವಾಗಿದೆ. ಭ್ರಷ್ಟಾಚಾರಕ್ಕೆ ಹಲವಾರು ಆಯಾಮಗಳಿದ್ದು, ಅನೇಕ ಅಂಶಗಳು ಇದಕ್ಕೆ ಕಾರಣವಾಗಿದೆ. ಈ ಹಿನ್ನಲೆಯನ್ನು ಆಧಾರವಾಗಿಟ್ಟುಕೊಂಡು ಪ್ರಸ್ತುತ ಲೇಖನದಲ್ಲಿ ಜನಸಾಮಾನ್ಯರ ನೆಲೆಗಟ್ಟಿನಲ್ಲಿ ಭ್ರಷ್ಟಾಚಾರ ಮತ್ತು ಅದರಿಂದಾಗುವ ಪರಿಣಾಮಗಳನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿಶ್ಲೇಷಿಸಲಾಗಿದೆ.

ಈ ಅಧ್ಯಯನಕ್ಕೆ ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಘಟ್ಟದಹಳ್ಳಿ ಗ್ರಾಮವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

**ಭ್ರಷ್ಟಾಚಾರದ ಅರ್ಥ ಮತ್ತು ವ್ಯಾಖ್ಯೆಗಳು**

ಸಾಮಾನ್ಯವಾಗಿ ಭ್ರಷ್ಟಾಚಾರವೆಂದರೇ ಲಂಚವಾಗಿ ಹಣವನ್ನು ಕೊಡುವುದು ಮತ್ತು ತೆಗೆದುಕೊಳ್ಳುವುದು ಎಂದರ್ಥ. ಇದನ್ನು ಸಾರ್ವಜನಿಕ ಅಧಿಕಾರವನ್ನು ಖಾಸಗಿ ಲಾಭಕ್ಕಾಗಿ

[1] *ಸಂಶೋಧನಾ ವಿದ್ಯಾರ್ಥಿ, ಸ್ನಾತ್ತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ.*

[2] *ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ.*

ದುರ್ಬಳಕೆ ಮಾಡುವುದು ಎನ್ನಬಹುದು. 'ಒಂದು ಸಾರ್ವಜನಿಕ ಅಧಿಕಾರದ ಅಥವಾ ವಿಶೇಷ ಸ್ಥಾನದ ಹಾಗೂ ಅದರ ಪ್ರಭಾವದ ಅನುಚಿತ ಅಥವಾ ಸ್ವರ್ಥ ಪ್ರಯೋಗಗಳನ್ನು ಭ್ರಷ್ಟಾಚಾರ' ಎಂದು ಸಿ.ಬಿ ಮೆಮೋರಿಯಾರವರು ಕರೆದಿದ್ದಾರೆ. ಹಾಗೂ 1988ರ ಭಾರತೀಯ ಭ್ರಷ್ಟಾಚಾರ ನಿಯಂತ್ರಣ ಕಾಯಿದೆಯು 'ಯಾವುದೇ ಸಾರ್ವಜನಿಕ ಅಧಿಕಾರಿಯು ತನ್ನ ಹುದ್ದೆಗೆ ಕಾನೂನು ರೀತಿಯಲ್ಲಿ ನೀಡುವ ಸಂಭಾವನೆಯನ್ನು ಹೊರತುಪಡಿಸಿ ಕಾನೂನುಬಾಹಿರ ಚಟುವಟಿಕೆಗಳಿಂದ ತೃಪ್ತಿ ಪಡೆಯುತ್ತಿದ್ದರೆ ಅದು ಭ್ರಷ್ಟಾಚಾರ' ಎಂದು ಹೇಳಿದೆ.

**ಭ್ರಷ್ಟಾಚಾರ ಮತ್ತು ಸಾಮಾನ್ಯ ಜನರು**

ಸಾಮಾನ್ಯ ಜನರಿಗೆ ಉತ್ತಮ ಆಡಳಿತ ದೊರಕದಿರಲು ಮೂಲ ಕಾರಣ ಸರ್ಕಾರಿ ನೌಕರರಲ್ಲಿರುವ ನೈತಿಕತೆಯ ಕೊರತೆ ಹಾಗೂ ಜನ ಸಾಮಾನ್ಯರಿಗೆ ಭ್ರಷ್ಟಾಚಾರ ಕಾಯಿದೆಯ ಅರಿವಿಲ್ಲದಿರುವುದ್ದರಿಂದ ಸರ್ಕಾರಿ ನೌಕರರ ಪ್ರಮಾಣಿಕತೆ, ದಕ್ಷತೆ, ಆದರ್ಶಗಳು ಮೂಲೆಗುಂಪಾಗಿ, ಸ್ವಜನಪಕ್ಷಪಾತ, ಸ್ವಾರ್ಥತೆ ಉದ್ಬವಗೊಂಡು ಭಷ್ಟಾಚಾರದ ಕದಂಬ ಬಾಹುಗಳು ಎಲ್ಲೆಡೆ ಪಸರಿಸುತ್ತಿವೆ. ಸಾಮಾನ್ಯ ಜನರಲ್ಲಿರುವ ಅನಕ್ಷರತೆ ಹಾಗೂ ಕಾನೂನು/ಜ್ಞಾನದ ಅಭಾವ ಮತ್ತು ನಾಗರಿಕ ಪ್ರಜ್ಞೆಯ ಕೊರತೆ ಭ್ರಷ್ಟಾಚಾರದ ವಿಫುಲ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತದೆ. ಅಧಿಕಾರಿಗಳು ಹಾಗೂ ರಾಜಕಾರಣಿಗಳು ಜನರ ಈ ಮುಗ್ದತೆ ಮತ್ತು ಅನಕ್ಷರತೆಯನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ. ಪರಿಣಾಮವಾಗಿ ಅಧಿಕಾರಿಗಳಿಗೆ ಜನರ ಭಯವೇ ಇಲ್ಲದಂತಾಗಿ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುವ ಹಾಗೂ ದುರ್ವತನೆಯಿಂದ ಕೂಡಿದ ಮನೋವೃತ್ತಿಯನ್ನು ಪ್ರದರ್ಶಿಸುತ್ತಾರೆ. ಈ ಭ್ರಷ್ಟಾಚಾರದ ಕಾರಣದಿಂದಾಗಿ ಉತ್ತಮ ಅಡಳಿತ ನೀಡುವಲ್ಲಿ ವಿಫಲವಾಗಿದೆ.

**ಅಧ್ಯಯನದ ಉದ್ದೇಶಗಳು**

- ಭ್ರಷ್ಟಾಚಾರದ ಬಗೆಗಿನ ಜನಸಾಮಾನ್ಯರ ಅಭಿಪ್ರಾಯಗಳನ್ನು ಅಭ್ಯಸಿಸುವುದು.
- ಜನಸಾಮಾನ್ಯರಲ್ಲಿ ಭ್ರಷ್ಟಚಾರ ನಿರ್ಮೂಲನೆಯ ಸಂಸ್ಥೆಗಳ ಅಭಿಪ್ರಾಯವನ್ನು ಅಧ್ಯಯನ ಮಾಡುವುದು.

**ಅಧ್ಯಯನದ ಮಹತ್ವ**

- ಸಾಮಾನ್ಯ ಜನರಿಗೆ ಭ್ರಷ್ಟಾಚಾರ ನಿರ್ಮೂಲನೆ ಸಂಸ್ಥೆಗಳ ಬಗ್ಗೆ ತಿಳುವಳಿಕೆ ಇದೆಯೇ ಎಂಬುದನ್ನು ಕೂಲಕುಂಶವಾಗಿ ಅಭ್ಯಸಿಸಲು ಸಹಕಾರಿಯಾಗಿದೆ.
- ಲಂಚಗುಳಿತನವನ್ನು ತಡೆಗಟ್ಟಲು ಮತ್ತು ಸಾಮಾನ್ಯ ಜನರಿಗೆ ಭ್ರಷ್ಟಾಚಾರದ ನಿರ್ಮೂಲನೆಗೆ ಅರಿವು ಮೂಡಿಸಲು ಉಪಯೋಗಕಾರಿಯಾಗಿದೆ.

**ಅಧ್ಯಯನದ ಮಾದರಿ**

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಘಟ್ಟದಹಳ್ಳಿ ಗ್ರಾಮದಲ್ಲಿ ಒಟ್ಟು 2152 ಜನಸಂಖ್ಯೆಯಿದ್ದು, ಇವರಲ್ಲಿ 30 ಜನ ಪುರುಷರು ಮತ್ತು 30 ಜನ ಮಹಿಳೆಯರನ್ನೊಳಗೊಂಡಂತೆ ಒಟ್ಟು 60 ಪ್ರತಿಕ್ರಿಯಾರ್ತಿ/ಪ್ರತಿವರ್ತಿಗಳನ್ನು ಆಯ್ಕೆ ಮಾಡಿಕೊಂಡು ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಸಂಶೋಧನಾ ತಂತ್ರಗಳು**

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಂದರ್ಶನ ಮತ್ತು ಸಂದರ್ಶನ ಅನುಸೂಚಿಯ ಸಹಾಯದಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅವಲೋಕನ ವಿಧಾನದಲ್ಲಿ ಸಹಭಾಗಿ ಅವಲೋಕನ ವಿಧಾನವನ್ನು ಬಳಕೆಮಾಡಿಕೊಳ್ಳುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿಯೊಂದಿಗೆ ಮಾಧ್ಯಮಿಕ ಮಾಹಿತಿ ಆಕರಗಳಾದ ಸಂಶೋಧನಾ ಲೇಖಗಳು, ಪತ್ರಿಕೆಗಳು, ಕನ್ನಡ ವಿಶ್ವಕೋಶ, ಕರ್ನಾಟಕ ರಾಜ್ಯಸರ್ಕಾರದ ಗೆಜಿಟಿಯರ್, ಅಂತರ್ಜಾಲ, ಸಂಶೋಧನಾ ಗ್ರಂಥಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ಮಾಹಿತಿಯನ್ನು ಸಮಾಜಶಾಸ್ತ್ರಿಯ ಚೌಕಟ್ಟಿನಲ್ಲಿ ವಿಶ್ಲೇಷಣೆ ಮಾಡಲಾಗಿದೆ.

**ಕೋಷ್ಠಕ 1: ಜನಸಾಮಾನ್ಯರಲ್ಲಿ ಭ್ರಷ್ಟಾಚಾರ ನಿರ್ಮೂಲನೆಯ ಸಂಸ್ಥೆಗಳ ಪಾತ್ರದ ಅರಿವಿನ ವಿವರ**

| ವಿವರ | ಆವೃತ್ತಿ | ಶೇಕಡವಾರು |
|---|---|---|
| ಲೋಕಾಯುಕ್ತ ಸಂಸ್ಥೆಯ ಬಗೆಗಿನ ಅರಿವು | 18 | 30.00 |
| ಭ್ರಷ್ಟಾಚಾರ ನಿಗ್ರಹ ದಳದ ಪಾತ್ರದ ಅರಿವು | 06 | 10.00 |
| ಭ್ರಷ್ಟಾಚಾರ ಕಾಯಿದೆಗಳ ಅರಿವು | 12 | 20.00 |
| ಲೋಕಪಾಲ ಕಾಯಿದೆ | 06 | 10.00 |
| ತಿಳಿದಿಲ್ಲ | 18 | 30.00 |
| ಒಟ್ಟು | 60 | 100.00 |

**ಮೂಲ: ಕ್ಷೇತ್ರಕಾರ್ಯ**

ಕೋಷ್ಠಕ 1 ರಲ್ಲಿ ಭ್ರಷ್ಟಾಚಾರ ನಿರ್ಮೂಲನಾ ಸಂಸ್ಥೆಗಳ ಬಗ್ಗೆ ಜನ ಸಾಮಾನ್ಯರು ಹೊಂದಿರುವ ಅರಿವನ್ನು ವಿವರಿಸಲಾಗಿದೆ. ಲೋಕಾಯುಕ್ತರ ಬಗ್ಗೆ ಶೇಕಡ 30 ರಷ್ಟು ಮಾಹಿತಿದಾರರು ಅರಿವನ್ನು ಹೊಂದಿದ್ದಾರೆ. ಶೇಕಡ 10ರಷ್ಟು ಮಾಹಿತಿದಾರರು ಭಷ್ಟಾಚಾರ

ನಿಗ್ರಹದಳದ ಪಾತ್ರದ ಬಗ್ಗೆ ತಿಳಿದಿದ್ದಾರೆ. ಹಾಗೆಯೇ ಶೇಕಡ 20ರಷ್ಟು ಮಾಹಿತಿದಾರರು ಭ್ರಷ್ಟಾಚಾರ ಕಾಯಿದೆಗಳ ಬಗ್ಗೆ ಮಾಹಿತಿಯನ್ನು ಹೊಂದಿದ್ದಾರೆ ಶೇಕಡ 10ರಷ್ಟು ಮಾಹಿತಿದಾರರಿಗೆ ಲೋಕಪಾಲ ಕಾಯಿದೆಯ ಬಗ್ಗೆ ತಿಳಿದಿದೆ. ಮತ್ತು ಶೇಕಡ 30 ರಷ್ಟು ಮಾಹಿತಿದಾರರಿಗೆ ಮೇಲಿನ ಯಾವ ಸಂಸ್ಥೆಗಳ ಬಗ್ಗೆ ಅರಿವು ಇರುವುದಿಲ್ಲ ಎಂದು ಈ ಅಧ್ಯಯನದಿಂದ ಕಂಡುಬರುತ್ತದೆ.

**ಅಧ್ಯಯನದಿಂದ ವ್ಯಕ್ತವಾದ ಅಂಶಗಳು**

- ಗ್ರಾಮೀಣ ಪ್ರದೇಶದ ಜನರಿಗೆ ಲೋಕಯುಕ್ತ ಸಂಸ್ಥೆಯ ಬಗ್ಗೆ ಅರಿವು ಇರುವುದು ತಿಳಿದುಬರುತ್ತದೆ. ಕಾರಣ ಲೋಕಯುಕ್ತ ಕಾರ್ಯವೈಖರಿಗಳಿಂದ ಸ್ವಲ್ಪ ಪ್ರಮಾಣದಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಈ ಸಂಸ್ಥೆಯ ಬಗ್ಗೆ ತಿಳಿದಿದೆ.
- ಗ್ರಾಮೀಣ ಪ್ರದೇಶದಲ್ಲಿ ಭ್ರಷ್ಟಾಚಾರ ನಿರ್ಮೂಲನೆಯ ಕಾಯಿದೆ ಹಾಗೂ ಸಂಸ್ಥೆಗಳ ಬಗ್ಗೆ ಸಂಪೂರ್ಣವಾದ ಮಾಹಿತಿ ಇಲ್ಲದಿರುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ.
- ಗ್ರಾಮೀಣ ಜನರಿಗೆ ಭ್ರಷ್ಟಾಚಾರ ನಿರ್ಮೂಲನೆಯ ಆಂದೋಲನದ ಕೊರತೆ ಇರುವುದು ಎದ್ದುಕಾಣುತ್ತದೆ.
- ಗ್ರಾಮೀಣ ಜನರಲ್ಲಿ ಅವಿದ್ಯಾವಂತರು ಹೆಚ್ಚಾಗಿರುವುದು ಈ ಅಧ್ಯಯನದಿಂದ ಕಂಡುಬರುತ್ತದೆ.

**ಸಲಹೆಗಳು**

- ಗ್ರಾಮೀಣ ಜನರಿಗೆ ಭ್ರಷ್ಟಾಚಾರ ನಿರ್ಮೂಲನೆ ಬಗ್ಗೆ ಜಾಗೃತಿ ಮೂಡಿಸುವುದು.
- ಗ್ರಾಮೀಣ ಪ್ರದೇಶದಲ್ಲಿ ಭ್ರಷ್ಟಾಚಾರ ನಿರ್ಮೂಲನೆಯ ಆಂದೋಲನಗಳನ್ನು ಏರ್ಪಡಿಸುವುದರ ಮೂಲಕ ಅವರಿಗೆ ಭ್ರಷ್ಟಾಚಾರ ನಿರ್ಮೂಲನೆ ಸಂಸ್ಥೆಗಳ ಬಗ್ಗೆ ಅರಿವು ಮೂಡಿಸುವುದು.
- ಗ್ರಾಮೀಣ ಜನರಿಗೆ ಮಾಹಿತಿ ಹಕ್ಕು ಕಾಯಿದೆಯ ಬಗ್ಗೆ ಮಾಹಿತಿ ನೀಡುವುದು.
- ಗ್ರಾಮೀಣ ಪ್ರದೇಶದ ಜನರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುವುದು.

**ಪರಾಮರ್ಶನ ಗ್ರಂಥಗಳು**


- Gandhi M.K. (1948). Daily Dairy. Navjuvan publishing House, Ahamadabad.
- Kohli Suresh. (1975). Corruption in India. Chetan Publication, New Delhi.

- Mamoria C.B. (1981). Social Problems and Social Disoraganistion in India. Kitab Mahal, Allahabad.
- Purohit S.K. (1994). Ancient Indian legal philosophy, Deep and Deep Publication, New Delhi.
- Ranjani Ranjan Jha. (1990). Lokayukta-The Indian Ombudsman. Rishi Publication, Varanasi.


IIMRD
JOURNALS